# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 66/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಲೀಲಾ | P.W | 13 |
| ತಂದೆಯ ಹೆಸರು | ದೇವರಾಜು | C.W | 23 |
| ವಯಸ್ಸು | 42 ವರ್ಷ | | |
| ಉದ್ಯೋಗ | ವ್ಯವಸಾಯ | ಪ್ರ.ವ.ಬೋ | |
| ವಾಸಸ್ಥಳ | ಕೋಗರವಳ್ಳಿ ಗ್ರಾಮ, ಸಕಲೇಶಪುರ | ದಿನಾಂಕಃ 30.03.2023 | |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಆರೋಪಿಯ ಪರಿಚಯವಿದೆ. ಆತ ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸದಲ್ಲಿದ್ದರು. 2005 ರಿಂದ 2008 ನೇ ಸಾಲಿನಲ್ಲಿ ನಾನು ಸದರಿ ಪಂಚಾಯ್ತಿಯ ಉಪಾಧ್ಯಕ್ಷೆಯಾಗಿದ್ದೆನು. ಅಧ್ಯಕ್ಷರಾಗಿ ಮರಿಯಮ್ಮ ಇದ್ದರು. ಗಣೇಶ್ ಮತ್ತು ಸಿದ್ದಬಸವೇಗೌಡರವರು ಕಾರ್ಯದರ್ಶಿಯಾಗಿದ್ದರು. ವಾಟರ್ ಮನ್ ಆಗಿ ಮಲ್ಲಿಕಾರ್ಜುನ ಮತ್ತು ಗೋಪಿನಾಥ ಇದ್ದರು. ಆರೋಪಿ ಎಲ್ಲರ ಜೊತೆ ವಿಶ್ವಾಸದಿಂದ ಇದ್ದರು. 2007 ರಿಂದ 2009 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಮನೆ ಮಂಜೂರಾಗಿದ್ದ ಬಗ್ಗೆ ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಿಯನ್ನು ಚೆಕ್ಕುಗಳಲ್ಲಿ ಫೋರ್ಜರಿ ಸಹಿ ಮಾಡಿ ಸದರಿ ಚೆಕ್ಕನ್ನು ಆತನು ಬ್ಯಾಂಕ್ ಗೆ ನೀಡಿ ಹಣ ಪಡೆದುಕೊಂಡು ಹಣ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ನನಗೆ ತಿಳಿಯಿತು. ಆರೋಪಿಯು

ಕಾರ್ಪೋರೇಷನ್ ಬ್ಯಾಂಕ್ , ಕೆನರಾ ಬ್ಯಾಂಕ್ ಹಾಗೂ ಎಸ್ ಬಿ ಐ ಬ್ಯಾಂಕ್ ಗಳಲ್ಲಿ ಅಂದಾಜು ರೂ. 14 ಲಕ್ಷ ಹಣ ದುರ್ಬಳಕೆ ಮಾಡಿರುವ ವಿಷಯ ತಿಳಿಯಿತು. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ವೈ ಡಿ ಆರ್ ವಕೀಲರು ಈ ಪ್ರಕರಣದಲ್ಲಿ ತಾವು ಆರೋಪಿ ಪರ ಮುಂದುವರೆಯುವುದಿಲ್ಲ ಎಂದು ತಿಳಿಸಿದ್ದು , ಆದರೆ ಈ ದಿನ ಆರೋಪಿಗೆ ನೀಡಿದ್ದ ವಾರೆಂಟನ್ನು ರೀಕಾಲ್ ಮಾಡಲು ಅರ್ಜಿ ಸಲ್ಲಿಸಿದ್ದು ಹಾಗೂ ಈ ಪ್ರಕರಣವು *2013* ನೇ ಇಸವಿಗೆ ಸೇರಿದ ಪ್ರಕರಣವಾದ ಕಾರಣ ಹಾಗೂ ಯಾವುದೇ ಸಕಾರಣಗಳು ಇಲ್ಲದ ಕಾರಣ ನಿರಾಕರಿಸಲಾಗಿದ್ದು , ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ-** ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.